


Issue : 28, January-March 2014 Ph : 0836-2444272 e-mail : pc_kvkd@rediffmail.com website : www.kvkdharwad.org

## Pre-Action Plan Meeting 2014-15



Pre-Action plan workshop (2014-15) for KVKs of UAS, Dharwad and Goa state was organized from $21^{st}$ to $22^{nd}$ February, 2014 at KVK, Saidapur Farm, Dharwad. The workshop was inaugurated by Hon'ble Vice-Chancellor, Dr. D.P. Biradar, with watering the plant and emphasized the Programme Co-ordinators to formulate suitable action plan for their jurisdiction and implement the demonstrations effectively. Dr. M.B. Chetti, Director of Extension, Dr. M.J. Chandregowda, Principal Scientist, ZPD (Zone-VIII), Bengaluru, Dr. S.T. Naik, Associate Director of Extension, Dr. P.S. Hugar, Technical Officer for KVKs and Dr. S.M. Mantur, Programme Co-ordinator, KVK, Dharwad were present during the occasion. During the workshop, Programme Co-ordinators of 10 KVKs presented their pre-action plan activities and at the end Dr. P.S. Hugar proposed the vote of thanks.

## Action Plan Workshop of KVKs of Karnataka and Goa for 2014-15



Action plan workshop of KVKs of Karnataka and Goa states for 2014-15 was organized from $3^{rd}$ to $5^{th}$ March, 2014 by Directorate of Extension, UAS, Dharwad. The workshop was inaugurated by Hon'ble Vice-Chancellor, Dr. D.P. Biradar with watering the plant and suggested all the Programme Co-ordinators of KVKs to formulate suitable action plan based on the problems and needs at the village level and implement the activities of their jurisdiction effectively

On this occasion Dr. Sreenath Dixit, ZPD (Zone-VIII), Bengaluru, DEs of UAS B, UAS D, UAS R, UHS, UAHS, KVAFSU, Officers, Experts of UAS, Dharwad and Officials of ZPD (Zone-VIII), Bengaluru were present. Dr. M.B. Chetti, Director of Extension, UAS, Dharwad welcomed all the delegates. During the workshop, Programme Co-ordinators of 33 KVKs presented their action plan activities and at the end Dr. M.J. Chandregowda, Principal Scientist, ZPD (Zone-VIII), Bengaluru proposed the vote of thanks. Dr. S.T. Naik, Associate Director of Extension, Dr. P.S. Hugar, Technical Officer for KVKs and Dr. S.M. Mantur, Programme Co-ordinator, KVK, Dharwad assisted for smooth conduct of the workshop.

## Exhibition

The Annul Conference of Vice Chancellors and Directors of ICAR institutes was conducted at KVK, Baramati during January 18-20, 2014.



Exhibition was also organized by different stakeholders for deficting innovative technologies in the field of Agriculture and allied activities on this occasion. Shri. Sharad Pawar, Hon'ble Union Minister for Agriculture, Dr. Sreenath Dixit, ZPD (Zone-VIII) and Dr. S.Prabhukumar, ZPD (Zone-I) visited stall of KVK, Dharwad.



## Exhibition of value added minor millet products



The exhibiktion on value added mimor millet products was organized at Vanavasi Ram mandir, Malamaddi, Dharwad by KVK, Dharwad on 04.02.2014. During exhibition different Self Help and Sthrishakti Groups were displayed different minor millets products prepared by them selves. Further the different minor millet products processed and packed by KVK, Dharwad and NAIP project, Rural Home Science College and Bakery Unit were also displayed. On this occassion tottally 12 stalls were erected and more than 300 clients visited. During exhibition Dr. M.B. Chetti, Director of Extension, UAS, Dharwad also visited the exhibition stalls. This programme was organized by Programme Co-ordinator, KVK, Dharwad under RKVY project.



## Animal Health Campaign



The Animal Health Campaign programme was organized by KVK, Dharwad under RKVY project at Devikoppa village of Kalaghatagi taluk in collaboration with Veterinary and Animal Science Department, Kalaghatagi on 05.02.2014. In this programme Dr. Siddalingappa, Veterinary Officer and staff treated more than 200 animals (bullocks, cows, buffaloes, goats and sheeps) for different diseases and 60 farmers were benefitted by this programme.



Similar, Animal Health Campaign programme was organized by KVK, Dharwad under RKVY project at Halligeri village of Dharwad taluk in collaboration with Veterinary and Animal Science Department, Dharwad on 10.02.2014. In this programme Dr. S.S. Bennur, Veterinary Officer and staff treated more than 300 animals including pet animals for different diseases and 70 farmers were benefitted by this programme.

# Field Days

Field day on Bengalgram (JG-11) was conducted on 06.01.2014 in the field of Shri. Ulavappa M. Natagal at Agasanahalli village of Dharwad taluka. During field day Dr. K. P. Gundannavar, SMS (Agril. Entomology) gave information on Integrated Pest Management in bengalgram. Dr. S. T. Hundekar, SMS (Soil Science) spoke on importance of field day and soil and water conservation, Dr. S. G. Raju, SMS (Plant Pathology) gave information of Integrated Disease Management in bengalgram. About 40 farmers and 4 farm women participated in the programme.





Field day on Safflower was organized on 12.02.2014 in the field of Shri. Siddappa Shiraguppi at Somapur village of Dharwad taluka. In this programme Dr. K. P. Gundannavar, SMS (Agril. Entomology) delivered the lecture on Integrated Pest Management in safflower, Dr. S.M. Hiremath (Horticulture) spoke on management of horticulture crops during summer season. About 48 farmers and 11 farm women participated and benefitted.

# Training programmes

The training programme under Friends of Coconut Tree (FOCT) on Palm Climbing and Plant Protection (30.12.2013 to 04.01.2014) was conducted at KVK, Dharwad with the sponsorship of Coconut Development Board, Regional Office, Bengaluru. 20 trainees selected from Dharwad district participated in the training programme and got benefited. During training programme palm climbing devices were distributed to all participants free of cost. The training programme was conducted smoothly and successfully under the leadership of Dr. S. M. Hiremath, SMS (Horticulture)








The training programmes on "Processing of minor millets, value addition and marketing" were organized on January 2-3 and 28-29, 2014 by KVK, Dharwad in collaboration with Directorate of Extension, UAS, Dharwad under RKVY project. During the programme method demonstration on preparation of various minor millet products was also conducted and 60 farm women were participated. The trainings programmes were conducted by Dr. Sarojani J. Karkannavar and Dr. Hemalath S.





## Dignitaries Visit





Dr. Sreenath Dixit, Zonal Project Director (Zone-VIII), ICAR, Bengaluru visited KVK, Saidapur Farm on 07-03-2014 and interacted with Programme Co-ordinator and Subject Matter Specialists about the infrastructure facilities and demonstration units established at KVK. Further, Zonal Project Director along with KVK team visited FLD fields at Dummawad village of Kalaghatagi taluka and interacted with beneficiaries of ICM in summer groundnut and mango FLDs.



Shri. B.R. Choukimath, CPI, Bijapur district Directorate of Civil Rights and Enforcement visited KVK on 04.01.2014 and interacted with scientists



Dr. R. Ezekiel, NAIP National Co-ordinator visited KVK on 22.01.2014 and interacted with scientists



Dr. D.P. Biradar, Hon'ble Vice Chancellor and Dr. M.B. Chetti, Director of Extension visited KVK fields on 06.02.2014 and interacted with scientists

## Trainings for next three months

**April-2014**

- Integrated Crop Management in Groundnut
- Integrated Crop Management in Onion
- Integrated Crop Management in Soybean
- Integrated Crop Management in Maize

**May-2014**

- Cultivation practices of Chilli
- Integrated Crop Management in Greengram and Blackgram
- Improved cultivation practices of Onion
- Integrated Pest Management in Greengram

**June-2014**

- Nutrient Management in Groundnut and Soybean
- Training on Market advocacy under NABARD project
- FOCT-Palm Climbing and Plant Protection
- Integrated Crop Management in Paddy, Chilli and Green peas
- Nutritious food for pregnant and lactating women



Dr. S.M. Mantur has taken charge of Programme Co-ordinator, Krishi Vigyan Kendra, Dharwad on 18.02.2014.


**Editor & Publisher :** **Dr. S.M. Mantur**
Programme Co-ordinator
Krishi Vigyan Kendra, Dharwad

**Associate Editors :** **Dr. S.T. Hundekar**
**Dr. K.P. Gundannavar**
**Dr. S.G. Raju**

**Type Setting and Design :** **DTP, Unit**
Publication Center
UAS, Dharwad

**Typing :** **Smt. Shailaja N. Galagali**
Krishi Vigyan Kendra, Dharwad



**From**

**Programme Co-ordinator**
Krishi Vigyan Kendra, Saidapur Farm,
Dharwad 580 005 (Karnataka)
**Telephone :** 0836-2444272
**E-mail :** pc_kvkd@rediffmail.com
**Website :** kvkdharwad.org


**To,**

**Book Post**




ಸಂಪುಟ : 28 ಜನವರಿ–ಮಾರ್ಚ 2014, Ph: 0836-2444272 ಮಿಂಚಂಚೆ : pc_kvkd@rediffmail.com ಅಂತರ್ಜಾಲ : www.kvkdharwad.org

## 2014–15 ನೆ ಸಾಲಿನ ಪೂರ್ವ ಕ್ರಿಯಾ ಯೋಜನೆಯ ಕಾರ್ಯಾಗಾರ




ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಅಧೀನದಲ್ಲಿರುವ ಮತ್ತು ಗೋವಾ ರಾಜ್ಯದ ಕೃಷಿ ವಿಜ್ಞಾನ ಕೇಂದ್ರಗಳ 2014–15 ನೇ ಸಾಲಿನ ಪೂರ್ವ ಕ್ರಿಯಾ ಯೋಜನೆಯ ಕಾರ್ಯಾಗಾರವನ್ನು ಫೆಬ್ರವರಿ 21–22, 2014 ರಂದು ಕೃಷಿ ವಿಜ್ಞಾನ ಕೇಂದ್ರ, ಸೈದಾಪುರ ಫಾರ್ಮ, ಧಾರವಾಡದಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಾಗಾರವನ್ನು ಡಾ. ಡಿ.ಪಿ. ಬಿರಾದಾರ, ಮಾನ್ಯ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ಗಿಡಕ್ಕೆ ನೀರೆರೆಯುವ ಮುಖಾಂತರ ಉದ್ಘಾಟಿಸಿ, ಎಲ್ಲ ಕೃಷಿ ವಿಜ್ಞಾನ ಕೇಂದ್ರಗಳ ಕಾರ್ಯಕ್ರಮ ಸಂಯೋಜಕರುಗಳಿಗೆ ಸೂಕ್ತ ಕ್ರಿಯಾ ಯೋಜನೆ ಸಿದ್ಧಪಡಿಸಿ ಪರಿಣಾಮಕಾರಿಯಾದ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ಸೂಚಿಸಿದರು. ಸದರಿ ಕಾರ್ಯಕ್ರಮದಲ್ಲಿ ಡಾ. ಎಂ.ಬಿ. ಚೆಟ್ಟಿ, ವಿಸ್ತರಣಾ ನಿರ್ದೇಶಕರು, ಡಾ. ಎಂ.ಜೆ. ಚಂದ್ರೇಗೌಡ, ಪ್ರಧಾನ ಸಂಶೋಧಕರು, ವಲಯ ಯೋಜನಾ ನಿರ್ದೇಶನಾಲಯ (ವಲಯ–8) ಬೆಂಗಳೂರು, ಡಾ. ಎಸ್.ಟಿ. ನಾಯಕ್, ಸಹ–ವಿಸ್ತರಣಾ ನಿರ್ದೇಶಕರು, ಡಾ. ಪಿ.ಎಸ್. ಹೂಗಾರ, ಕೃಷಿ ವಿಜ್ಞಾನ ಕೇಂದ್ರಗಳ ತಾಂತ್ರಿಕ ಅಧಿಕಾರಿ ಹಾಗೂ ಡಾ.ಎಸ್.ಎಂ. ಮಂಟೂರ, ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಹಾಗೂ ವಿಷಯ ತಜ್ಞರು ಇವರುಗಳು ಉಪಸ್ಥಿತರಿದ್ದರು. ಈ ಕಾರ್ಯಾಗಾರದಲ್ಲಿ 10 ಕೃಷಿ ವಿಜ್ಞಾನ ಕೇಂದ್ರಗಳ ಕಾರ್ಯಕ್ರಮ ಸಂಯೋಜಕರುಗಳು ಪೂರ್ವ ಕ್ರಿಯಾ ಯೋಜನೆಯನ್ನು ಮಂಡಿಸಿದರು ಹಾಗೂ ಕಾರ್ಯಕ್ರಮವು ಡಾ. ಪಿ.ಎಸ್. ಹೂಗಾರ ಇವರ ವಂದನೆಯೊಂದಿಗೆ ಮುಕ್ತಾಯಗೊಂಡಿತು.

## ಕರ್ನಾಟಕ ಹಾಗೂ ಗೋವಾ ರಾಜ್ಯದ ಕೃಷಿ ವಿಜ್ಞಾನ ಕೇಂದ್ರಗಳ 2014–15 ರ ಕ್ರಿಯಾ ಯೋಜನೆ ಕಾರ್ಯಾಗಾರ



ಕರ್ನಾಟಕ ಮತ್ತು ಗೋವಾ ರಾಜ್ಯಗಳ ಕೃಷಿ ವಿಜ್ಞಾನ ಕೇಂದ್ರಗಳ 2014–15 ನೇ ಸಾಲಿನ ಕ್ರಿಯಾ ಯೋಜನೆಯ ಕಾರ್ಯಾಗಾರವನ್ನು ಮಾರ್ಚ 3–5, 2014 ರಂದು ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಾಗಾರವನ್ನು ಡಾ. ಡಿ.ಪಿ. ಬಿರಾದಾರ, ಮಾನ್ಯ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ಗಿಡಕ್ಕೆ ನೀರೆರೆಯುವ ಮುಖಾಂತರ ಉದ್ಘಾಟಿಸಿ, ಎಲ್ಲ ಕೃಷಿ ವಿಜ್ಞಾನ ಕೇಂದ್ರಗಳ ಕಾರ್ಯಕ್ರಮ ಸಂಯೋಜಕರುಗಳಿಗೆ ಗ್ರಾಮ ಮಟ್ಟದಲ್ಲಿರುವ ಸಮಸ್ಯೆ ಹಾಗೂ ಅವಶ್ಯಕತೆಗನುಗುಣವಾಗಿ ಸೂಕ್ತ ಕ್ರಿಯಾ ಯೋಜನೆ ಸಿದ್ಧಪಡಿಸಲು ಸೂಚಿಸಿದರು.

ಸದರಿ ಕಾರ್ಯಕ್ರಮದಲ್ಲಿ ಡಾ. ಶ್ರೀನಾಥ ದೀಕ್ಷಿತ್, ವಲಯ ಯೋಜನಾ ನಿರ್ದೇಶಕರು (ವಲಯ–8), ಐಸಿಎಆರ್, ಬೆಂಗಳೂರು, ವಿವಿಧ ಕೃಷಿ, ತೋಟಗಾರಿಕೆ ಹಾಗೂ ಪಶು ವೈದ್ಯಕೀಯ ವಿಶ್ವ ವಿದ್ಯಾಲಯಗಳ ವಿಸ್ತರಣಾ ನಿರ್ದೇಶಕರುಗಳು ಹಾಗೂ ಕೃ.ವಿ.ವಿ., ಧಾರವಾಡದ ಅಧಿಕಾರಿಗಳು, ತಾಂತ್ರಿಕ ತಜ್ಞರುಗಳು ಹಾಗೂ ವಲಯ ಯೋಜನಾ ನಿರ್ದೇಶನಾಲಯದ ವಿಜ್ಞಾನಿಗಳು ಉಪಸ್ಥಿತರಿದ್ದರು. ಈ ಕಾರ್ಯಾಗಾರದಲ್ಲಿ 33 ಕೃಷಿ ವಿಜ್ಞಾನ ಕೇಂದ್ರಗಳ ಕಾರ್ಯಕ್ರಮ ಸಂಯೋಜಕರುಗಳು ಕ್ರಿಯಾ ಯೋಜನೆಯನ್ನು ಮಂಡಿಸಿದರು.

## ವಸ್ತು ಪ್ರದರ್ಶನ

ಜನವರಿ 18–20, 2014 ರವರೆಗೆ ಕೃಷಿ ವಿಜ್ಞಾನ ಕೇಂದ್ರ, ಬಾರಾಮತಿಯಲ್ಲಿ ನಡೆದ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳ ಹಾಗೂ ಐ.ಸಿ.ಎ.ಆರ್. ನಿರ್ದೇಶನಾಲಯಗಳ ವಾರ್ಷಿಕ ಸಮ್ಮೇಳನದ ವಸ್ತುಪ್ರದರ್ಶನದಲ್ಲಿ ಭಾರತ ಸರಕಾರದ ಕೃಷಿ ಮಂತ್ರಿಗಳಾದ ಸನ್ಮಾನ್ಯ ಶ್ರೀ. ಶರದ್ ಪವಾರ, ವಲಯ–8 ರ ವಲಯ ಯೋಜನಾ ನಿರ್ದೇಶಕರಾದ ಡಾ. ಶ್ರೀನಾಥ ದೀಕ್ಷಿತ್ ಹಾಗೂ ವಲಯ–1 ರ ವಲಯ ಯೋಜನಾ ನಿರ್ದೇಶಕರಾದ ಡಾ. ಎಸ್. ಪ್ರಭುಕುಮಾರ್, ಇವರುಗಳು ಕೃಷಿ ವಿಜ್ಞಾನ ಕೇಂದ್ರ, ಧಾರವಾಡದ ವಸ್ತು ಪ್ರದರ್ಶನದ ಮಳಿಗೆಗೆ ಭೇಟಿ ನೀಡಿ ಪ್ರಶಂಸೆ ವ್ಯಕ್ತಪಡಿಸಿದರು.





## ಸಿರಿಧಾನ್ಯ ಮೌಲ್ಯವರ್ಧಿತ ಪದಾರ್ಥಗಳ ಮೇಳ



ದಿನಾಂಕ: 04.02.2014 ರಂದು ಧಾರವಾಡ ಶಹರದ ಮಾಳಮಡ್ಡಿಯ ಶ್ರೀ ವನವಾಸಿ ರಾಮ ಮಂದಿರದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಿರಿಧಾನ್ಯ ಮೌಲ್ಯವರ್ಧಿತ ಪದಾರ್ಥಗಳ ಮೇಳವನ್ನು ಧಾರವಾಡ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಏರ್ಪಡಿಸಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ಮಾರ್ಗದರ್ಶನದಲ್ಲಿ ಸ್ವ–ಸಹಾಯ, ಸ್ತ್ರೀಶಕ್ತಿ ಗುಂಪಿನಿಂದ ತಯಾರಿಸಲಾದ ಸಿರಿಧಾನ್ಯ ಪದಾರ್ಥಗಳು, ಕೃಷಿ ವಿಜ್ಞಾನ ಕೇಂದ್ರದಿಂದ ಸಂಸ್ಕರಿಸಿ ಪ್ಯಾಕ್ ಮಾಡಿದ ಸಾವೆಅಕ್ಕಿ, ನವಣಕ್ಕಿ, ರಾಗಿಹಿಟ್ಟು ಮತ್ತು ಡೈಯಾಬಿಟಿಕ್ ಮಿಕ್ಸ್, ಎನ್.ಎ.ಐ.ಪಿ. ಯೋಜನೆ, ಗ್ರಾಮೀಣ ಗೃಹ ವಿಜ್ಞಾನ ಮಹಾವಿದ್ಯಾಲಯದ ತಂತ್ರಜ್ಞಾನ ಹಾಗೂ ಉತ್ಪನ್ನಗಳು, ಬೇಕರಿ ಘಟಕ ಹಾಗೂ ಆಹಾರ ಮತ್ತು ಪೋಷಣೆ ವಿಭಾಗದಿಂದ ಸಿರಿಧಾನ್ಯ ಮೌಲ್ಯವರ್ಧಿತ



ಪದಾರ್ಥಗಳ ವಸ್ತು ಪ್ರದರ್ಶನ ಹಾಗೂ ಮಾರಾಟವನ್ನು ಏರ್ಪಡಿಸಲಾಗಿತ್ತು. ಈ ಮೇಳದಲ್ಲಿ ಒಟ್ಟು 12 ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ಸುಮಾರು 300 ಗ್ರಾಹಕರು ಇದರ ಸದುಪಯೋಗವನ್ನು ಪಡೆದುಕೊಂಡರು. ವಿಸ್ತರಣಾ ನಿರ್ದೇಶಕರಾದ ಡಾ. ಎಂ.ಬಿ. ಚೆಟ್ಟಿ ಇವರು ಮೇಳದಲ್ಲಿ ಭಾಗವಹಿಸಿದ ಸ್ತ್ರೀಶಕ್ತಿ ಗುಂಪಿನ ಸದಸ್ಯರೊಂದಿಗೆ ಚರ್ಚಿಸಿ, ಸೂಕ್ತ ಮಾರ್ಗದರ್ಶನ ನೀಡಿದರು. ಡಾ. ಜೆ.ಎಸ್.ಹಿಳ್ಳಿ ಇವರ ನೇತೃತ್ವದಲ್ಲಿ ಡಾ. ಸರೋಜನಿ ಕರಕಣ್ಣವರ, ವಿಷಯ ತಜ್ಞರು (ಗೃಹ ವಿಜ್ಞಾನ) ಹಾಗೂ ಡಾ. ಎಸ್.ಜಿ. ರಾಜು, ವಿಷಯ ತಜ್ಞರು (ಸಸ್ಯರೋಗ ಶಾಸ್ತ್ರ) ಸಂಯೋಜಕರಾಗಿ ಸಿರಿಧಾನ್ಯ ಮೇಳವನ್ನು ಯಶಸ್ವಿಯಾಗಿ ಆಚೋಜಿಸಿದರು.

## ಪಶು ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ

ಕೃಷಿ ವಿಜ್ಞಾನ ಕೇಂದ್ರ, ಸೈದಾಪೂರ ಫಾರ್ಮ, ಧಾರವಾಡ ಹಾಗೂ ಪಶು ಆಸ್ಪತ್ರೆ, ದೇವಿಕೊಪ್ಪ, ತಾ॥ ಕಲಘಟಗಿ, ಇವರುಗಳ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಪಶು ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರವನ್ನು ದಿನಾಂಕ : 05.02.2014 ರಂದು ಏರ್ಪಡಿಸಲಾಗಿತ್ತು. ಶಿಬಿರದಲ್ಲಿ 60ಕ್ಕೂ ಹೆಚ್ಚು ರೈತರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಕಲಘಟಗಿ ಪಶು ಇಲಾಖೆಯಿಂದ ಡಾ. ಸಿದ್ದಲಿಂಗಪ್ಪಾ ಹಾಗೂ ಸಿಬ್ಬಂದಿ ವರ್ಗ ಪಾಲ್ಗೊಂಡು 200 ಕ್ಕೂ ಹೆಚ್ಚು ಜಾನುವಾರು, ಕುರಿ, ಆಡು ಹಾಗೂ ಸಾಕು ಪ್ರಾಣಿಗಳ ಆರೋಗ್ಯ ತಪಾಸಿಸಿ ಸೂಕ್ತ ಚಿಕಿತ್ಸೆ ನೀಡಿದರು.



ಧಾರವಾಡ ತಾಲ್ಲೂಕಿನ ನಿಗದಿ ಪಶು ಆಸ್ಪತ್ರೆ ವ್ಯಾಪ್ತಿಯಲ್ಲಿಯ ಹಳ್ಳಿಗೇರಿ ಗ್ರಾಮದಲ್ಲಿಯೂ ಸಹ ಪಶು ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರವನ್ನು ದಿನಾಂಕ: 10.02.2014 ರಂದು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ 70ಕ್ಕೂ ಹೆಚ್ಚು ರೈತ ಹಾಗೂ ರೈತ ಮಹಿಳೆಯರು ಪಾಲ್ಗೊಂಡಿದ್ದರು. ಧಾರವಾಡ ಪಶು ಇಲಾಖೆಯಿಂದ ಡಾ. ಎಸ್.ಎಸ್. ಬೆನ್ನೂರ ಹಾಗೂ ಸಿಬ್ಬಂದಿ ವರ್ಗ ಶಿಬಿರದಲ್ಲಿ ಪಾಲ್ಗೊಂಡು 300 ಕ್ಕೂ ಹೆಚ್ಚು ಜಾನುವಾರುಗಳು, ಕುರಿ, ಆಡುಗಳು ಹಾಗೂ ಸಾಕು ಪ್ರಾಣಿಗಳ ಆರೋಗ್ಯ ತಪಾಸಿಸಿ ಸೂಕ್ತ ಚಿಕಿತ್ಸೆ ನೀಡಿದರು.



ಡಾ. ಎಸ್.ಎಮ್. ಹಿರೇಮಠ, ವಿಷಯ ತಜ್ಞರು (ತೋಟಗಾರಿಕೆ), ಹಾಗೂ ಡಾ. ಕೆ.ಪಿ. ಗುಂಡಣ್ಣವರ, ವಿಷಯ ತಜ್ಞರು (ಕೀಟಶಾಸ್ತ್ರ), ಕಾರ್ಯಕ್ರಮಗಳನ್ನು ಆಯೋಜಿಸಿ, ಡಾ. ಜೆ.ಎಸ್. ಹಿಳ್ಳಿ, ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಇವರ ನೇತೃತ್ವದಲ್ಲಿ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಿದರು.

## ಕ್ಷೇತ್ರೋತ್ಸವಗಳು

ದಿನಾಂಕ 06.01.2014 ರಂದು ಧಾರವಾಡ ತಾಲೂಕಿನ ಅಗಸನಳ್ಳಿ ಗ್ರಾಮದ ಪ್ರಗತಿಪರ ರೈತ ಶ್ರೀ. ಉಳವಪ್ಪ ಮ. ನಟಗಲ್ ಇವರ ಕ್ಷೇತ್ರದಲ್ಲಿ, ಕಡಲೆ ಬೆಳೆಯ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ನೇತೃತ್ವ ವಹಿಸಿದ ಡಾ. ಕೆ.ಪಿ. ಗುಂಡಣ್ಣವರ, ಕಡಲೆ ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ, ಡಾ. ಎಸ್.ಜಿ. ರಾಜು, ಸಮಗ್ರ ರೋಗ ನಿರ್ವಹಣೆ ಹಾಗೂ ಡಾ. ಎಸ್.ಟಿ. ಹುಂಡೇಕರ ನೀರು ಹಾಗೂ ಮಣ್ಣಿನ ಸಂರಕ್ಷಣೆ ಕುರಿತು ರೈತರಿಗೆ ಉಪಯುಕ್ತ ಮಾಹಿತಿ ನೀಡಿದರು. ಸುಮಾರು 40 ರೈತ ಹಾಗೂ 4 ರೈತ ಮಹಿಳೆಯರು ಈ ಕ್ಷೇತ್ರೋತ್ಸವದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಂಡರು.





ಧಾರವಾಡ ತಾಲೂಕಿನ ಸೋಮಾಪುರ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಸಿದ್ದಪ್ಪ ಶಿರಗುಪ್ಪಿ ಇವರ ಹೊಲದಲ್ಲಿ ದಿನಾಂಕ 12.02.2014 ರಂದು ಕುಸುಬೆ ಬೆಳೆ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ನೇತೃತ್ವ ವಹಿಸಿದ ಕೀಟಶಾಸ್ತ್ರ ವಿಜ್ಞಾನಿಯಾದ ಡಾ. ಕೆ.ಪಿ. ಗುಂಡಣ್ಣವರ ಕುಸುಬೆ ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ ಹಾಗೂ ತೋಟಗಾರಿಕೆ ವಿಜ್ಞಾನಿಯಾದ ಡಾ. ಎಸ್.ಎಮ್. ಹಿರೇಮಠ ಬೇಸಿಗೆಯಲ್ಲಿ ತೋಟಗಾರಿಕೆ ಬೆಳೆಗಳ ನಿರ್ವಹಣೆ ಕುರಿತು ಮಾಹಿತಿ ನೀಡಿದರು. 48 ರೈತ ಹಾಗೂ 11 ರೈತ ಮಹಿಳೆಯರು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡದುಕೊಂಡರು.

## ತರಬೇತಿ ಕಾರ್ಯಕ್ರಮಗಳು

ತೆಂಗು ಅಭಿವೃದ್ಧಿ ಮಂಡಳಿಯ ಪ್ರಾಂತೀಯ ಕಛೇರಿ ಬೆಂಗಳೂರು, ಇವರ ಪ್ರಾಯೋಜಕತ್ವದಲ್ಲಿ ದಿನಾಂಕ 30.12.2013 ರಿಂದ 04.01.2014 ರವರೆಗೆ "ತೆಂಗಿನ ಮರ ಏರಿ ಹೆಡೆ ಶುಚಿಗೊಳಿಸುವ ಹಾಗೂ ಕಾಯಿ ಇಳಿಸುವ" ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಧಾರವಾಡ ಜಿಲ್ಲೆಯ ವಿವಿಧ ತಾಲೂಕುಗಳಿಂದ 20 ಪ್ರತಿನಿಧಿಗಳು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು. ಪ್ರತಿ ಶಿಬಿರಾರ್ಥಿಗೆ "ತೆಂಗಿನ ಮರ ಏರುವ ಸಾಧನ"ವನ್ನು ಉಚಿತವಾಗಿ ನೀಡಲಾಯಿತು. ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಷಯ ತಜ್ಞರಾದ ಡಾ. ಎಸ್. ಎಂ ಹಿರೇಮಠ ಇವರು ಈ ತರಬೇತಿಯ ನೇತೃತ್ವ ವಹಿಸಿದ್ದರು








ವಿಸ್ತರಣಾ ನಿರ್ದೇಶನಾಲಯ, ಕೃವಿವಿ, ಧಾರವಾಡ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಧಾರವಾಡ ಇವರ ಸಂಯುಕ್ತ ಆಶ್ರಯದಲ್ಲಿ ಜನವರಿ 2 ರಿಂದ 3 ಹಾಗೂ 28 ರಿಂದ 29, 2014 ರವರೆಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ, "ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ ನಿಯಮಾವಳಿಗಳ" ಕುರಿತು ಎರಡು ತರಬೇತಿಗಳನ್ನು ಹಮ್ಮಿಕೊಳ್ಳಲಾಗಿತ್ತು. 60 ಜನ ರೈತ ಮಹಿಳೆಯರು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು. ಸಿರಿಧಾನ್ಯಗಳಿಂದ ತಯಾರಿಸಬಹುದಾದ ವಿವಿಧ ಖಾದ್ಯಗಳ ತಯಾರಿಕೆಯ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞರಾದ ಡಾ. ಸರೋಜನಿ ಜೆ. ಕರಕಣ್ಣವರ, ಡಾ. ಹೇಮಲತಾ ಎಸ್., ವಿಸ್ತರಣಾ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಇವರು ನೇತೃತ್ವ ವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.





## ಕೇಂದ್ರಕ್ಕೆ ಗಣ್ಯರ ಭೇಟಿ





ಡಾ. ಶ್ರೀನಾಥ ದೀಕ್ಷಿತ್, ವಲಯ ಯೋಜನಾ ನಿರ್ದೇಶಕರು (ವಲಯ–8), ಐಸಿಎಆರ್, ಬೆಂಗಳೂರು ಇವರು ಕೃಷಿ ವಿಜ್ಞಾನ ಕೇಂದ್ರಕ್ಕೆ ದಿನಾಂಕ: 07–03–2014 ರಂದು ಭೇಟಿ ನೀಡಿ, ಕಾರ್ಯಕ್ರಮ ಸಂಯೋಜಕರು ಮತ್ತು ವಿಷಯ ತಜ್ಞರುಗಳೊಂದಿಗೆ ಕೇಂದ್ರದಲ್ಲಿ ಸ್ಥಾಪಿಸಿರುವ ಮೂಲಭೂತ ಸೌಲಭ್ಯ ಹಾಗೂ ವಿವಿಧ ಪ್ರಾತ್ಯಕ್ಷಿಕೆ ಘಟಕಗಳಿಗೆ ಭೇಟಿ ನೀಡಿ ಚಟುವಟಿಕೆಗಳ ಕುರಿತು ಚರ್ಚಿಸಿದರು. ಮುಂಚೂಣಿ ಪ್ರಾತ್ಯಕ್ಷಿಕೆ ಕೈಗೊಂಡಿರುವ ಕಲಘಟಗಿ ತಾಲೂಕಿನ ದುಮ್ಮವಾಡ ಹಳ್ಳಿಗೆ ವಲಯ ಯೋಜನಾ ನಿರ್ದೇಶಕರು ಕೇಂದ್ರದ ವಿಜ್ಞಾನಿಗಳೊಂದಿಗೆ ಭೇಟಿ ನೀಡಿ, ಮಾವು ಹಾಗೂ ಬೇಸಿಗೆ ಶೇಂಗಾ ಸಮಗ್ರ ಬೆಳೆ ಪದ್ಧತಿಯ ಮುಂಚೂಣಿ ಪ್ರಾತ್ಯಕ್ಷಿಕೆಯ ಫಲಾನುಭವಿಗಳೊಂದಿಗೆ ಚರ್ಚಿಸಿದರು.



ದಿ. 4.1.2014 ರಂದು ಶ್ರೀ. ಬಿ. ಆರ್. ಚೌಕಿಮಠ, ಸಿಪಿಐ, ಬಿಜಾಪುರ ಜಿಲ್ಲಾ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಇವರು ಭೇಟಿ ನೀಡಿ ವಿಜ್ಞಾನಿಗಳೊಂದಿಗೆ ಚರ್ಚಿಸಿದರು



ದಿ. 22.1.2014 ರಂದು ಡಾ. ಆರ್. ಎಝಿಕೆಲ್, ಎನ್.ಎ.ಐ.ಪಿ. ಯ (ಕಂಪೊನೆಂಟ್–2) ರಾಷ್ಟ್ರೀಯ ಸಂಯೋಜಕರು ಭೇಟಿ ನೀಡಿ ವಿಜ್ಞಾನಿಗಳೊಂದಿಗೆ ಚರ್ಚಿಸಿದರು



ದಿ.6.2.2014 ರಂದು ಕೃ.ವಿ.ವಿ.,ಧಾರವಾಡದ ಮಾನ್ಯ ಕುಲಪತಿಗಳಾದ ಡಾ. ಡಿ.ಪಿ. ಬಿರಾದಾರ ಹಾಗೂ ವಿಸ್ತರಣಾ ನಿರ್ದೇಶಕರಾದ ಡಾ. ಎಮ್.ಬಿ. ಚೆಟ್ಟಿ ಇವರಿಂದ ಭೇಟಿ

## ಮುಂಬರುವ ತ್ರೈಮಾಸಿಕದಲ್ಲಿ ಕೈಗೊಳ್ಳಲಾಗುವ ತರಬೇತಿ ಕಾರ್ಯಕ್ರಮಗಳು

**ಎಪ್ರಿಲ್–2014**

- ಶೇಂಗಾ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ
- ಈರುಳ್ಳಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ
- ಸೋಯಾಅವರೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ
- ಗೋವಿನಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆ

**ಮೇ–2014**

- ಮೆಣಸಿನಕಾಯಿ ಬೇಸಾಯ ಕ್ರಮಗಳು
- ಹೆಸರು ಮತ್ತು ಉದ್ದು ಬೆಳೆಗಳಲ್ಲಿ ಸಮಗ್ರ ಬೆಳೆ ನಿರ್ವಹಣೆ
- ಈರುಳ್ಳಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು
- ಹೆಸರಿನಲ್ಲಿ ಸಮಗ್ರ ಕೀಟ ನಿರ್ವಹಣೆ

**ಜೂನ್–2014**

- ಶೇಂಗಾ, ಸೋಯಾಅವರೆ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ
- NABARD ಯೋಜನೆಯಡಿ ಕೃಷಿ ಮಾರುಕಟ್ಟೆಯಲ್ಲಿ ತರಬೇತಿ
- ತೆಂಗು ಗೆಳೆಯರ ಬಳಗ
- ಭತ್ತ, ಮೆಣಸಿನಕಾಯಿ ಹಾಗೂ ವಠಾಣಿ ಸಮಗ್ರ ಬೆಳೆ ನಿರ್ವಹಣೆ
- ಗರ್ಭಿಣಿ ಹಾಗೂ ಬಾಣಂತಿಯರಿಗೆ ಪೌಷ್ಟಿಕ ಆಹಾರ



ಡಾ. ಎಸ್.ಎಮ್. ಮಂಟೂರ ಇವರು ಕೃಷಿ ವಿಜ್ಞಾನ ಕೇಂದ್ರದ ನೂತನ ಕಾರ್ಯಕ್ರಮ ಸಂಯೋಜಕರಾಗಿ ದಿನಾಂಕ: 18.02.2014 ರಿಂದ ಅಧಿಕಾರ ಸ್ವೀಕರಿಸಿದರು.


ಸಂಪಾದಕರು ಹಾಗೂ ಪ್ರಕಾಶಕರು : ಡಾ. ಎಸ್.ಎಮ್. ಮಂಟೂರ, ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ

ಸಹ ಸಂಪಾದಕರು : ಡಾ. ಎಸ್. ಎಮ್. ಹಿರೇಮಠ, ಡಾ. ಸರೋಜನಿ ಜೆ. ಕರಕಣ್ಣವರ, ಶ್ರೀ. ಕುಮಾರ ಸಿ.ಜೆ.

ಅಕ್ಷರ ಜೋಡಣೆ ಮತ್ತು ವಿನ್ಯಾಸ : ಡಿಟಿಪಿ, ಘಟಕ, ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ

ಬೆರಳಚ್ಚುಗಾರರು : ಶ್ರೀಮತಿ ಶೈಲಜಾ ಎನ್. ಗಲಗಲಿ, ಕೃಷಿ ವಿಜ್ಞಾನ ಕೇಂದ್ರ, ಧಾರವಾಡ



ಇಂದ,

ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಸೈದಾಪುರ ಫಾರ್ಮ
ಧಾರವಾಡ 580 005 (ಕರ್ನಾಟಕ)
ದೂರವಾಣಿ : 0836–2444272
ಮಿಂಚಂಚೆ : pc_kvkd@rediffmail.com
ವೆಬ್‌ಸೈಟ್ : kvkdharwad.org


ಗೆ,

ತೆರೆದ ಅಂಚೆ